# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಶಿವರುದ್ರಯ್ಯ, ಪಂಚಾಯಿತಿ ಅಭಿವೃದ್ದಿ ಅಧಿಕಾರಿ, ಕ್ಯಾಮೇನಹಳ್ಳಿ ಗ್ರಾಮಪಂಚಾಯತಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:** ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ **D.O.No. Compt/UPLOK/BD-5976/2014/ARLO1-1, ದಿ: 20.07.2017.**

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ: 20.06.2017 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಶ್ರೀ ವೆಂಕಟೇಶ್ ಬಿನ್ ಕಿರಾನಾಯ್ಕ ಶಕುನಿತಿಮ್ಮನಹಳ್ಳಿ ತಾಂಡ ಗ್ರಾಮ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಶಿವರುದ್ರಯ್ಯ, ಪಂಚಾಯಿತಿ ಅಭಿವೃದ್ದಿ ಅಧಿಕಾರಿ, ಕ್ಯಾಮೇನಹಳ್ಳಿ ಗ್ರಾಮಪಂಚಾಯತಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ ಮತ್ತು 2) ಶ್ರೀ ಕಾಳಿಚರಣ್, ಉಪಾಧ್ಯಕ್ಷರು (ಇನ್ನು ಮುಂದೆ "1 ಮತ್ತು 2ನೇ ಎದುರುದಾರರು" ಎಂದು ಕ್ರಮವಾಗಿ ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**ದೂರಿನ ಸಂಕ್ಷಿಪ್ತ ವಿವರಣೆ:**

ದೂರುದಾರರು ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ಕ್ಯಾಮೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಂಜಿಎನ್ಆರ್‌ಇಜಿಎ ಯೋಜನೆ ಅಡಿ ಶಕುನಿತಿಮ್ಮನ ಹಳ್ಳಿ ವಾರ್ಡ್ ನಂ.174, 171/4 ಹಾಗೂ ಬುಡಮಾರನಹಳ್ಳಿ ವಾರ್ಡ ಸರ್ವೆ ನಂ.19ರಲ್ಲಿ ಅಕ್ರಮವಾಗಿ ರಾತ್ರೋರಾತ್ರಿ ಚೆಕ್‌ಡ್ಯಾಂಗಳನ್ನು ನಿರ್ಮಾಣ ಮಾಡಿದ್ದಾರೆ ಹಾಗೂ ಉದ್ಯೋಗ ಚೀಟಿಗಳನ್ನು ಸೃಷ್ಟಿಸಿ, ಕೂಲಿ ಕಾರ್ಮಿಕರ ನಕಲಿ ಸಹಿಗಳನ್ನು ಬಳಸಿ ಬೇರೆ ತಾಲ್ಲೂಕಿನ ಕಾರ್ಮಿಕರನ್ನು ಕರೆಸಿ ಜೆಸಿಬಿ ಯಂತ್ರಗಳ ಮೂಲಕ ಚೆಕ್ ಡ್ಯಾಂ ನಿರ್ಮಿಸಿದ್ದಾರೆ. ಈ ಬಗ್ಗೆ ಒಂಬುಡ್ಸಮನ್ ಮತ್ತು ಕೊರಟಗೆರೆ ತಾಲ್ಲೂಕ್ ಕಾರ್ಯನಿರ್ವಹಣಾಧಿಕಾರಿ ಸ್ಥಳ ಪರಿಶೀಲನೆ ಮಾಡಿ, ಸದರಿ ಕಾಮಗಾರಿಗಳನ್ನು ಜೆಸಿಬಿಯಿಂದ ಮಾಡಿಸಿಲ್ಲವೆಂದು ವರದಿ ಸಲ್ಲಿಸಿದ್ದಾರೆ. ಈ ಬಗ್ಗೆ ಎದುರುದಾರರು ಎಂಜಿಎನ್ಆರ್‌ಇಜಿಎ ಯೋಜನೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿ, ಭ್ರಷ್ಟಾಚಾರದಲ್ಲಿ ತೊಡಗಿರುವುದಾಗಿ ದೂರುದಾರರು ಹೇಳಿದ್ದಾರೆ.

**ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ರವರನ್ನು ಕೇಳಲಾಗಿ, ಸದರಿಯವರನ್ನು ತಮ್ಮ ವರದಿಯಲ್ಲಿ–**

ಸರ್ವೆ ನಂ.171 ಮತ್ತು 19ರಲ್ಲಿ ಚೆಕ್ ಡ್ಯಾಂ ನಿರ್ಮಿಸಿರುವ ಬಗ್ಗೆ ಕಾಮಗಾರಿಯ ಸ್ಥಳ ಆಯ್ಕೆ ಮತ್ತು ಗುಣಮಟ್ಟದ ಬಗ್ಗೆ ರಾಜ್ಯ ಗುಣ ನಿಯಂತ್ರಣ ಮೇಲ್ವಿಚಾರಣಾ ಇಲಾಖೆಯ ತಾಂತಿಕ ತಜ್ಞರ ವರದಿಯನ್ನು ಪಡೆದಿದ್ದು, ಅದರಲ್ಲಿ ಸದರಿಯವರು ಸದರಿ ಕಾಮಗಾರಿಗಳು ಎಂಜಿಎನ್ಆರ್‌ಇಜಿಎ ಯೋಜನೆಯ 2013–14ನೇ ಸಾಲಿನ ಹೆಚ್ಚುವರಿ ಕ್ರಿಯಾ ಯೋಜನೆಯಲ್ಲಿ ಕಾರ್ಯನಿವಾಹಕ ಅಧಿಕಾರಿಗಳು, ಕೊರಟಗೆರೆ ತಾಲ್ಲೂಕು ಪಂಚಾಯತ್‌ರವರಿಂದ ಅನುಮೋದನೆಗೊಂಡಿದ್ದು, ಸದರಿ ಕಾಮಗಾರಿಗೆ ರೂ.4 ಲಕ್ಷ ತಾಂತ್ರಿಕ ಮಂಜೂರಾತಿ ನೀಡಿದ್ದಾರೆ. ತಡೆ ಆಣೆ ನಿರ್ಮಾಣದ

ಸ್ಥಳ ಆಯ್ಕೆ ಸೂಕ್ತವಾಗಿದೆ. ಕಾಮಗಾರಿ ಕೆಲಸವು ನಿರ್ಮಾಣ ಹಂತದಲ್ಲಿ ಸ್ಥಗಿತಗೊಂಡಿದೆ. ತಡೆ ಆಣೆಯ ಮುಖ್ಯ ಗೋಡೆ, ಎರಡು ಬದಿಯ ರಕ್ಷಣಾ ಗೋಡೆಯ ಕೆಲಸವು ಪೂರ್ಣಗೊಂಡಿದ್ದು, ಗೋಡೆಗಳ ಮೇಲೆ ಕೋಪಿಂಗ್ ಕಾಂಕ್ರೀಟ್ ಸಹ ಹಾಕಿದ್ದಾರೆ. ಸದರಿ ಕೆಲಸಕ್ಕೆ ಯಂತ್ರ ಬಳಸಿರುವ ಯಾವುದೇ ಕುರುಹುಗಳು ಕಾಣುವದಿಲ್ಲ. ಕೆಲಸಗಳು ಪೂರ್ಣಗೊಂಡ ಮುಖ್ಯ ಗೋಡೆಯ ಮಧ್ಯ ಭಾಗದಲ್ಲಿ ಸುಮಾರು 8 ಮೀಟರ್ ಕಲ್ಲು ಕಟ್ಟಡವನ್ನು 0.40 ಮೀಟರ್ ಆಳದವರೆಗೆ ಕೆಡವಿ ಹಾಕಿದ್ದಾರೆ. ಈ ಹಂತದಲ್ಲಿ ಕಾಮಗಾರಿ ಕೆಲಸ ಸ್ಥಗಿತಗೊಂಡಿದೆ. ಕೆಡವಿ ಹಾಕಿದ ಗೋಡೆಯ ಭಾಗವನ್ನು ಪರಿಶೀಲಿಸಲಾಗಿ, ಗೋಡೆಯ ನಿರ್ಮಾಣಕ್ಕೆ ಉಪಯೋಗಿಸಿರುವ ಸಿಮೆಂಟ್ ಮತ್ತು ಮರಳು ಮಿಶ್ರಣ ಬಹಳ ಕಳಪೆ ಮಟ್ಟದ್ದಾಗಿರುತ್ತದೆ. ಸದರಿ ಮಿಶ್ರಣಕ್ಕೆ ಮರಳಿನ ಪ್ರಮಾಣ ಹೆಚ್ಚಿರುವುದು ಕಂಡು ಬಂದಿದೆ. ಸಿಮೆಂಟ್ ಮತ್ತು ಮರಳನ್ನು ಕೈಯಲ್ಲಿ ಮುಟ್ಟಿದರೆ ಪುಡಿಯಾಗುತ್ತಿದ್ದು, ಗೋಡೆಗಳ ಮೇಲೆ ಹಾಕಿರುವ ಕಾಂಕ್ರಿಟನ ಗುಣಮಟ್ಟವೂ ಸಹ ಬಹಳ ಕಳಪೆಯಾಗಿದೆ. ಕಾಲಿನಿಂದ ಕೆರೆದರೆ ಉದುರಿ ಬೀಳುತ್ತದೆ. ಈ ಮೇಲಿನ ಅಂಶಗಳನ್ನು ಗಮನಿಸಲಾಗಿ, ಕಲ್ಲು ಕಟ್ಟಡ ಕೆಲಸ ತೀರ ಕಳಪೆಯಾಗಿದೆ. ಸದರಿ ಕಾಮಗಾರಿಗೆ ಹಣ ಪಾವತಿಸಿರುವುದು ಸೂಕ್ತವಾಗಿಲ್ಲ ಮತ್ತು ಸದರಿ ಕಾಮಗಾರಿಗಳ ಕೆಲಸದ ಅಳತೆಗಳನ್ನು ಸಹ ನಮೂದಿಸಿಲ್ಲ ಮತ್ತು ಸದರಿ ಕೆಲಸ ಎಂಐಎಸ್ ನಲ್ಲಿ ಅಳವಡಿಸುವಲ್ಲಿ ತಾಲ್ಲೂಕ್ ಜಲಾನಯನ ಅಧಿಕಾರಿಯಾದ ಶ್ರೀ ಸೋಮಶೇಖರ್ ರವರು ಸಹ ಜವಾಬ್ದಾರರೆಂದು ಹೇಳಿದ್ದಾರೆ. ತನಿಖಾಧಿಕಾರಿಗಳು ಕೊರಟಗೆರೆ ತಾಲ್ಲೂಕು ಜಲಾಯನ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸೋಮಶೇಖರ ರವರು ಜವಬ್ದಾರರೆಂದು ಹೇಳಿದ ಮೇರೆಗೆ, ಸದರಿಯವರನ್ನು 3ನೇ ಎದುರುದಾರರನ್ನಾಗಿ ಮುಖಪುಟಸದಲ್ಲಿ ಸೇರಿಸಲಾಗಿದೆ.

**<u>ದೂರಿಗೆ ಎದುರುದಾರರು ಆಕ್ಷೇಪಣೆಯನ್ನು ಕೇಳಲಾಗಿ, ಸದರಿಯವರು ತಮ್ಮ ಆಕ್ಷೇಪಣೆಯಲ್ಲಿ–</u>**

2013–14ನೇ ಸಾಲಿನ ಎಂಜಿಎನ್‌ಆರ್‌ಜಿಎ ಯೋಜನೆ ಅಡಿ ಸರ್ವೆ ನಂ.171/4 ಮತ್ತು 19ರಲ್ಲಿ ಉದ್ಯೋಗ ಚೀಟಿ ಹೊಂದಿರುವ ಕೂಲಿ ಕಾರ್ಮಿಕರಿಂದ ಜೆಸಿಬಿ ಯಂತ್ರಗಳನ್ನು ಬಳಸದೆ ಕಾರ್ಮಿಕರಿಂದ ನಿರ್ವಹಿಸಲಾಗಿದೆ. ಈ ಬಗ್ಗೆ ಒಂಬುಡ್ಸ್‌ಮನ್ ಮತ್ತು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ್ ಪಂಚಾಯತ್, ಕೊರಟಗೆರೆ ರವರು ಸ್ಥಳ ಪರಿಶೀಲನೆ ಮಾಡಿ, ಮಾನ್ಯ ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬೆಂಗಳೂರು ರವರಿಗೆ ವರದಿ ಸಲ್ಲಿಸಿದ್ದು, ಸದರಿ ಕಾಮಗಾರಿಗಳನ್ನು ಪರಿಶೀಲನೆಯ ಬಗ್ಗೆ ಚೆಕ್ ಡ್ಯಾಂ ಕಾಮಗಾರಿಗಳ ಸ್ಥಳ ಆಯ್ಕೆ ಮತ್ತು ಗುಣಮಟ್ಟದ ಬಗ್ಗೆ ರಾಜ್ಯ/ ಜಿಲ್ಲೆಯ ಗುಣಮಟ್ಟ ನಿಯಂತ್ರಣ ಮೇಲ್ವಿಚಾರಕರು ಪರಿಶೀಲನೆ ಮಾಡಿ ವರದಿ ನೀಡಿದ ನಂತರ ಸಲ್ಲಿಸಲಾಗುವುದೆಂದು ಹೇಳಿದ್ದಾರೆ.

**<u>ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–</u>**

ಸದರಿ ಕಾಮಗಾರಿಗಳನ್ನು ಎಂಜಿಎನ್‌ಆರ್‌ಇಜಿಎ ಯೋಜನೆ ಮಾರ್ಗಸೂಚಿಯ ಪ್ರಕಾರ ಗ್ರಾಮಸಭೆಯಲ್ಲಿ ಆಸಕ್ತ, ಫಲಾನುಭವಿಗಳ ಬೇಡಿಕೆ ಆಧರಿಸಿ, ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಿ, ತಾಲ್ಲೂಕ್ ಪಂಚಾಯತ್, ಜಿಲ್ಲಾ ಪಂಚಾಯತ್ ಅನುಮೋದನೆಯಾದ ನಂತರ ಕೃಷಿ, ತೋಟಗಾರಿಕೆ, ಅರಣ್ಯ, ಜಲಾನಯನ, ಪಶು ಸಂಗೋಪನೆ, ರೇಷ್ಮೆ, ಮೀನುಗಾರಿಕೆ ಅನುಮೋದಿತ ಕಾಮಗಾರಿಗಳು ಅಕುಶಲ ಕಾರ್ಮಿಕರ ಬೇಡಿಕೆ ಆಧರಿಸಿ ಸಂಬಂಧಿಸಿದ ಇಲಾಖೆಗೆ ಕಳುಹಿಸಲಾಗಿದೆ. ಸಂಬಂಧಿಸಿದ ಇಲಾಖೆಗಳ ಅನುಮೋದನೆ ದೊರೆತ ನಂತರ ಗ್ರಾಮ ಪಂಚಾಯತ್‌ಗಳ ಉಸ್ತುವಾರಿ ಮತ್ತು ಎನ್‌ಎಂಆರ್ ಪರಿಶೀಲನೆಯಾದ ಬಳಿಕ ತಾಂತ್ರಿಕ ಸಿಬ್ಬಂದಿ ಅಳತೆ ಪುಸ್ತಕ ದಾಖಲಿಸಿ, ಜಾಬ್ ಕಾರ್ಡ್ ಹೊಂದಿದ ಕಾರ್ಮಿಕರ ಮೂಲಕ ಖಾತೆಗೆ ಜಮಾ ಮಾಡಲಾಗುತ್ತದೆ. ಎಲ್ಲಾ ಕಾಮಗಾರಿಗಳು ಸರ್ಕಾರದ ಮಾರ್ಗಸೂಚಿಯನ್ವಯ ನಿರ್ವಹಣೆ ಮಾಡಲಾಗಿದೆ. ಸದರಿ ಕಾಮಗಾರಿಗಳನ್ನು ಜೆಸಿಬಿ ಯಂತ್ರದ ಮೂಲಕ ನಿರ್ವಹಿಸಿಲ್ಲವೆಂದು ಹೇಳಿದ್ದಾರೆ. ಎದುರುದಾರರ ಆಕ್ಷೇಪಣೆಗಳಿಗೆ ಪ್ರತ್ಯುತ್ತರವನ್ನು ಸಲ್ಲಿಸುವಂತೆ ದೂರುದಾರರನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ, ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದಿದ್ದಾರೆ.

**<u>ಕಡತ ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೆಂದರೆ:</u>**

2013–14ನೇ ಸಾಲಿನ ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿ ಬಡಮಾನಹಳ್ಳಿ ಗ್ರಾಮದ ಸರ್ವೆ ನಂ.19 ಮತ್ತು

ಶಕುನಿತಿಮ್ಮನಹಳ್ಳಿ ಗ್ರಾಮದ ಸರ್ವೆ ನಂ.171/4ರಲ್ಲಿ ತಡೆ ಆಣೆ ನಿರ್ಮಾಣ ಕಾಮಗಾರಿಗೆ ರೂ.4 ಲಕ್ಷ ಮಂಜೂರಾಗಿದ್ದು, ಸದರಿ ಕಾಮಗಾರಿಗಳ ಸ್ಥಳ ಆಯ್ಕೆ ಸೂಕ್ತವಾಗಿದ್ದು, ಕಾಮಗಾರಿ ಕೆಲಸವು ನಿರ್ಮಾಣ ಹಂತದಲ್ಲಿ ಸ್ಥಗಿತಗೊಂಡಿದೆ. ಸದರಿ ಕಾಮಗಾರಿಯ ಎರಡು ಬದಿಯ ರಕ್ಷಣಾ ಗೋಡೆಗಳ ಕೆಲಸ ಸಂಪೂರ್ಣವಾಗಿದ್ದು, ಗೋಡೆಗಳ ಮೇಲೆ ಕೋಪಿಂಗ್ ಕಾಂಕ್ರೀಟ ಸಹ ಹಾಕಿರುವುದು ದಾಖಲೆಗಳಿಂದ ಕಂಡು ಬಂದಿದೆ. ಸದರಿ ಕಾಮಗಾರಿಗಳು ಪೂರ್ಣಗೊಂಡ ನಂತರ ಮುಖ್ಯ ಗೋಡೆಯ ಮಧ್ಯ ಭಾಗದಲ್ಲಿ ಸುಮಾರು 8 ಮೀಟರ್ ಕಲ್ಲು ಕಟ್ಟಡವನ್ನು 4 ಮೀಟರ್ ಆಳದವರೆಗೆ ಕೆಡವಿ ಹಾಕಿದ್ದು, ಆ ಹಂತದಲ್ಲಿ ಕಾಮಗಾರಿ ಕೆಲಸ ಸ್ಥಗಿತಗೊಂಡಿದೆ. ಸದರಿ ಕಾಮಗಾರಿಯ ಸಿಮೆಂಟ್ ಮತ್ತು ಮರಳಿನ ಮಿಶ್ರಣವನ್ನು ಕೈಯಿಂದ ಮುಟ್ಟಿದರೆ ಪುಡಿಯಾಗುತ್ತಿದ್ದು, ಕಾಮಗಾರಿ ಕಳಪೆಯಿಂದ ಕೂಡಿದೆ. ಅದೇ ರೀತಿ, ಸದರಿ ಕಾಮಗಾರಿಯ ಬಗ್ಗೆ ಅಳತೆ ಪುಸ್ತಕದಲ್ಲಿ ನಮೂದಿಸಿಲ್ಲ ಮತ್ತು ಎಂಐಎಸ್ ನಲ್ಲಿ ಸಹ ಅಳವಡಿಸದೇ ಇರುವುದು ಕಂಡು ಬಂದಿದೆ. ಸದರಿ ಕಾಮಗಾರಿಯನ್ನು ಮಾನವ ಸಂಪನ್ಮೂಲದಿಂದ ನಿರ್ವಹಣೆ ಮಾಡಿರುವ ಬಗ್ಗೆ ಸದರಿ ಕಾರ್ಮಿಕರು ಹೊಂದಿರುವ ಜಾಬ್ ಕಾರ್ಡ್ ವಿವರ, ಅವರ ಖಾತೆಗೆ ಹಣ ಜಮಾ ಆಗಿರುವ ಬಗ್ಗೆ ಬ್ಯಾಂಕ್ ದಾಖಲೆಗಳು ಮತ್ತು ಸದರಿಯವರು ಆ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಬರುವ ಕಾರ್ಮಿಕರೇ ಎಂಬ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಎಂಜಿಎನ್ಆರ್ಇಜಿಎ ಯೋಜನೆಯ ಮಾರ್ಗಸೂಚಿಯಲ್ಲಿ ಹೇಳಲಾದ ಷರತ್ತುಗಳಿಗನುಗುಣವಾಗಿ ಕಾಮಗಾರಿ ನಿರ್ವಹಣೆ ಮಾಡದೇ, ಕಳಪೆ ಕಾಮಗಾರಿ ನಿರ್ವಹಿಸಿ, ಸರ್ಕಾರದ ಹಣ ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ. 2ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲಾಗಿದೆ.

ಈ ಹಿನ್ನೆಲೆಯಲ್ಲಿ ಶ್ರೀ ಶಿವರುದ್ರಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕ್ಯಾಮೇನಹಳ್ಳಿ ಗ್ರಾಮಪಂಚಾಯತಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ ಇವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ ನಿಯಮ 3(1) ಅಡಿಯಲ್ಲಿ ದರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ) ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/632/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 09-08-2017.</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಶಿವರುದ್ರಯ್ಯ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕ್ಯಾಮೇನಹಳ್ಳಿ ಗ್ರಾಮಪಂಚಾಯತಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಗಳು ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಪಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ 1 ರಿಂದ 102 ರವರೆಗಿನ ಮೂಲ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಹಿಂದಿರುಗಿಸಿದೆ).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಕೊರಟಗೆರೆ, ತುಮಕೂರು ಜಿಲ್ಲೆ.
6. ಶ್ರೀ ಶಿವರುದ್ರಯ್ಯ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕ್ಯಾಮೇನಹಳ್ಳಿ ಗ್ರಾಮಪಂಚಾಯತಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ.
7. ಗಣಕಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.